ನುಡಿಯು ಪ್ರೇಮ/ಕಾಮದ ಪರಿಭಾಷೆಯಾಗಿ ಬಳಕೆಯಾಗುವುದನ್ನು ಗಮನಿಸಿರುತ್ತೇವೆ. 'ಸೀರೆ ಮುಳ್ಳಿನ ಮೇಲೆ ಬಿದ್ರೂ ಮುಳ್ಳು ಸೀರೆ ಮೇಲೆ ಬಿದ್ರೂ ಹರಿಯೋದು ಸೀರೆ' ಎನ್ನುತ್ತಾ ಹೆಣ್ಣಿನ ಶೀಲದ ಪರಿಕಲ್ಪನೆಯನ್ನು ಸೀರೆಗೆ ಕಟ್ಟಿ ಹಾಕುತ್ತೇವೆ. ಅಮ್ಮನ ಮಡಿಲಿನ ಬೆಚ್ಚನೆಯ ಭಾವವನ್ನು ಸೀರೆ ಮಾತ್ರ ಕೊಡಲು ಸಾಧ್ಯ. ಮಣ್ಣಿನ ವಾಸನೆಯಂತೆ, ಮಡಿಲಿನ ಗಮಲು ಸೀರೆಯು ನೀಡಲು ಮಾತ್ರ ಸಾಧ್ಯ. ಅಮ್ಮಾವ್ರ ಗಂಡಂದಿರು ಹೆಂಡತಿಯ ಸೆರಗು ಹಿಡಿದರೆ, ಪುಕ್ಕಲು ಮಕ್ಕಳು ಅಮ್ಮನ ಸೆರಗಿನ ಹಿಂದೆ ಬಚ್ಚಿಟ್ಟುಕೊಳ್ತಾರೆ. ಸೀರೆ ಎಂಬುದು ಬರಿಯ ಉಡುಪೇ? ತಲೆ ಮೇಲೆ ಹೊದ್ದರೆ ಛತ್ರಿ, ಭುಜದ ಮೇಲೆ ಹೊದ್ದರೆ ಶಾಲು! ಮಕ್ಕಳ ಸಿಂಬಳ ಒರೆಸುವ ನ್ಯಾಪ್ಕಿನ್ನು, ಹಣೆಯ ಬೆವರು ಒರೆಸುವಾಗ ಕರ್ಚೀಫು, ಸ್ನಾನದ ಮೈ ಒರೆಸುವ ಟವೆಲ್ಲು, ಮಲಗುವಾಗ ಹೊದಿಕೆ, ಮೇಲಾಸು, ಮಡಚಿಟ್ಟು ತಲೆ ದಿಸೆಯಲ್ಲಿಟ್ಟರೆ ತಲೆದಿಂಬು, ಕಾಲೊರೆಸಲು, ಅಡುಗೆಮನೆ ಕಟ್ಟೆ ಒರೆಸಲು, ನೆಲ ಒರೆಸಲು ತೊಳೆದ ಪಾತ್ರೆ ಒರೆಸಲು, ಹಳೆಯ ಸಾಮಾಗ್ರಿಗಳ ಮೇಲೆ ಧೂಳು ಹಿಡಿಯದಂತೆ ಹೊದಿಸಲು ಹೀಗೆ ಬಹು ಉಪಯೋಗಿ ಸೀರೆಗೆ ಬಹುಪರಾಕು ಹೇಳದಿರಲಾದೀತೆ?

ಸೀರೆ ಖರೀದಿಸುವಂತೆಯೇ ಅದನ್ನು ಸಂರಕ್ಷಿಸುವುದೂ ದೊಡ್ಡ ಜವಾಬ್ದಾರಿಯ ಕೆಲಸ. ಬೇಸಿಗೆಯಲ್ಲಿ ಹಳೆಯ ರೇಷ್ಮೆ ಸೀರೆಗಳನ್ನು ಬಿಸಿಲಿಗೆ ಹಾಕುವುದು, ನುಸಿ ಗುಳಿಗೆ ಇಡುವುದು, ಚಂದನದ ಪುಡಿ ಇಟ್ಟು ಗಮಗಮಿಸುವಂತೆ ಮಾಡುವುದು, ನಾಜೂಕಾಗಿ ಒಗೆಯುವುದು, ನೆರಳಿನಲ್ಲೇ ನೆನೆಸುವುದು, ಇಸ್ತ್ರಿ ಮಾಡಿಸುವುದು, ಡ್ರೈ ಕ್ಲೀನಿಗೆ ಕೊಡುವುದು, ಇವೆಲ್ಲಾ ಸೀರೆಯನ್ನು ರಕ್ಷಿಸುವ ಸಕಲೋಪಾಯಗಳು. ಸೀರೆಯ ಬೆಲೆ ಎಂದರೆ ಕೇವಲ ಮುಖಬೆಲೆಯಲ್ಲ; ಅದರ ಹಿನ್ನೆಲೆ. ನಿಶ್ಚಿತಾರ್ಥ, ಮದುವೆ, ಸೀಮಂತ, ಬಾಣಂತನ, ಋತುಮತಿಯ ಕಾಲದ ಆರತಿಯ ಸೀರೆ ಹೀಗೆ ಭಾವನೆಗಳ ಗುಚ್ಛವೇ ಸೀರೆಯಾಗಿರುತ್ತದೆ.

ಮದುವೆಯ ಭರ್ಜರಿ ಜರಿಯ ಸೀರೆಗಳನ್ನು ಉಟ್ಟ ಅಮ್ಮಂದಿರು ಅದನ್ನು ಮುಂದೆ ತಮ್ಮ ಮಗಳಿಗೋ ಮೊಮ್ಮಗಳಿಗೋ ಜರಿ ಲಂಗವಾಗಿ, ಚೂಡಿಯ ಟಾಪ್ ಆಗಿ, ದುಪ್ಪಟ್ಟವಾಗಿ ಹೊಲಿಸಿಕೊಳ್ಳಲು ಧಾರಾಳವಾಗಿ ಕೊಡುವುದುಂಟು. ಇದು ಸೀರೆಯ ಅಪ್ಡೇಷನ್. ಈಗೀಗ ಸೀರೆಗಳನ್ನು ಗೋಡೆಯಲ್ಲಿ ಇಳಿಬಿಟ್ಟು ಮನೆಯ ಅಲಂಕಾರಕ್ಕೆ ವಿಶೇಷ ಮೆರುಗು ತರುತ್ತಾರೆ. ಕಿಟಕಿ–ಬಾಗಿಲುಗಳಿಗೆ ಪರದೆಯಾಗಿ ಬಳಸುತ್ತಾರೆ. ಹಳೆಯ ಸೀರೆಗಳಿಂದ ಕಾಲೊರೆಸುವ ಬಟ್ಟೆ ಹೆಣೆಯುತ್ತಾರೆ, ಟೇಬಲ್ಲಿನ ಮೇಲಾಸು ಮಾಡುತ್ತಾರೆ ನೀನಾರಿಗಾದೆಯೋ ಎಂದು ಇತರೆ ಬಟ್ಟೆಗಳನ್ನು ಹಂಗಿಸುವಷ್ಟು ಸೀರೆಯು ಬಹು ಉಪಯೋಗಿ ವಸ್ತ್ರವಾಗಿದೆ. ಹಾಗೆಯೇ, ತೊಟ್ಟಿಲಿಗೆ ಮೆತ್ತನೆ ಹಾಸಾಗುವ, ಜೋಳಿಗೆ ಮಾಡಿ ಹಸುಮಗುವನ್ನು ಬೆಚ್ಚಗೆ ಮಲಗಿಸುವ ಸೀರೆಯು ನೇಣಿಗೆ ಶರಣಾಗುವವರ ಕೊರಳನ್ನೂ ಬಿಗಿಯುತ್ತದೆ ಎಂದರೆ ಬೆಚ್ಚಿ ಬೀಳಬೇಕಾಗುತ್ತದೆ.

ಪ್ರತಿಕ್ರಿಯಿಸಿ: feedback@sudha.co.in

# ಕೋಳಿ ಕೂಗುವಷ್ಟರಲ್ಲಿ



■ ಸ. ರಘುನಾಥ

ಜೀರುಂಡೆ, ಬಾವಲಿ, ಗೂಬೆಗಳಿಗೆ ಸ್ವೇಚ್ಛೆಯ ಕತ್ತಲು. ಹೆದರುವವರು ಹೆದರಿ ಮುದುಡಿ ಮುಸುಕೆಳೆದುಕೊಳ್ಳುವಂಥ ಕತ್ತಲು.

ಕಲ್ಲು ಕರಗುವ ಸಮಯ. ಇದು ದಿಟವೆ? ಕವಿಸಮಯವೆ? ಕಲ್ಲು ಕರಗುವುದೆಂದರೇನೇ ಒಂದು ರೀತಿಯ ಹೆದರಕೆ. ದೆವ್ವಗಳು ಅಲೆದಾಡುತ್ತವೆ. ಕೆಟ್ಟಗಂಟಿ ಚೌಡಿಯರು ತಿರುಗಾಡುವ ಸಮಯವೆಂದು ನಂಬಿಸಿದ ಕಥೆಗಳನ್ನು ಮನಸ್ಸು ಹೇಳುವುದು ಈಗಲೇ.

ಘಲ್ ಘಲ್ ಗೆಜ್ಜೆ. ದೂರದಿಂದ ಹತ್ತಿರಕ್ಕೆ. ಹತ್ತಿರದಿಂದ ದೂರಕ್ಕೆ. ಬಾಗಿಲು ಬಡಿಯುವುದೆ? ಅದರ ಮೇಲೆ 'ನಾಳೆ ಬಾ' ಎಂದು ಬರೆದಿರುವೆನೆ? ಬರೆದಂತೆಯೂ ಬರೆಯದಿರುವಂತೆಯೂ ಅನುಮಾನ. ಈ ರಾತ್ರಿ ಬಾಗಿಲು ಬಡಿಯದಂತೆ ತಡೆಯಪ್ಪಾ ಹನುಮಂತ ಎಂದು ಬೇಡಿಕೊಂಡೆ. ಭಯದಲ್ಲಿ ಹನುಮಾನ್ ಚಾಳೀಸ ಮರೆತು ಹೋಯಿತು. ಬಾಯಿಪಾಠ ಮಾಡಿದ್ದ 'ಐ ಗಿರಿ ನಂದಿನಿ...' ಇಷ್ಟೇ ಹೊರಟಿದ್ದು. ಈ ರಾತ್ರಿ ಏನೂ ಆಗದೆ ಕಳೆದರೆ ಸಾಕು.

ನಿಶ್ಶಬ್ದ.

ಇದು ಇನ್ನೊಂದು ರೀತಿಯ ಭಯ. ಇದು ಹೋಗಲು ಪರಿಚಿತ ಧ್ವನಿ ಕೇಳಿಸಬೇಕು. ಬೆಕ್ಕು ಕೂಗಿದರೂ ನಾಯಿ ಬೊಗುಳಿದರೂ ದನವೋ ಕರುವೋ ಅಂಬಾ ಎಂದರೂ ಕುರಿಯೋ ಮೇಕೆಯೋ ಮರಿಯೋ ಬ್ಯಾ, ಮೇಮೇ ಅಂದರೂ ಇರುವೆಯೊಂದು ಕಚ್ಚಿದರೂ... ಸಾಕು ಒಂಟಿಯಾಗಿರು ಈ ಹೊತ್ತಿನಲ್ಲಿ.

ಆದರೆ ಇವುಗಳಲ್ಲೊಂದೂ ಆಗಲಿಲ್ಲ. ಹೀಗೆ ಅಂದುಕೊಂಡಷ್ಟು ಹೊತ್ತು ದಣಿದಿತ್ತೇನೊ ಭಯ. ವಿರಾಮ ಮುಗಿದ ಸಿನಿಮಾದಂತೆ ಸುರುವಾಯಿತು.

ಕೋಳಿ ಕೂಗಿತು.

ನಿದ್ದೆ ತುಂಬಿತು.

ಬೆಳ್ಳನೆ ಬೆಳಗಾಯಿತು. ■